**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**
**ತಿಪಟೂರು**

**ಸಿ.ಸಿ ನಂ. 1029/2017**

ಚಾಸಾಃ 1
ಫ್ರಾಸಾಃ 1

**ದಿನಾಂಕಃ 06-04-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಪುಟ್ಟಪ್ಪ |
| ತಂದೆಯ/ಗಂಡನ ಹೆಸರು | ಃ | ಧರ್ಮೇಗೌಡ |
| ವಯಸ್ಸು | ಃ | 46 ವರ್ಷ |
| ಉದ್ಯೋಗ | ಃ | ಕೆ ಎಸ್ ಆರ್ ಟಿ ಸಿ ಡ್ರೈವರ್ |
| ವಾಸ ಸ್ಥಳ | ಃ | ಶಿವಮೊಗ್ಗ |

**ಮುಖ್ಯ ವಿಚಾರಣೆ ಎಪಿಪಿಯವರಿಂದಃ**

ಆರೋಪಿತರನ್ನು ನಾನು ನೋಡಿರುತ್ತೇನೆ. ನನ್ನನ್ನು ಕೆ ಎಸ್ ಆರ್ ಟಿ ಸಿ ಬಸ್ಸ್ ಸಂಖ್ಯೆ ಕೆಎ-17-ಎಫ್-1722 ಬಸ್ಸಿಗೆ ಚಾಲಕನಾಗಿ ಬೆಂಗಳೂರು-ಶಿವಮೊಗ್ಗ ಮಾರ್ಗವಾಗಿ ದಿಃ 13-11-2016 ರಂದು ನೇಮಕ ಮಾಡಿರುತ್ತಾರೆ. ನಾನು ದಿಃ 13-11-2016 ರಂದು ಬೆಂಗಳೂರು ಬಿಟ್ಟು ಶಿವಮೊಗ್ಗಕ್ಕೆ ಹೋಗುವಾಗ ತುಮಕೂರು-ಶಿವಮೊಗ್ಗ ರಸ್ತೆ ಎನ್ ಹೆಚ್ 206 ಹುಚ್ಚಗೊಂಡನಹಳ್ಳಿ ಬಳಿ ನಾನು ಬಸ್ಸ್ ನ್ನು ಚಲಾಯಿಸಿಕೊಂಡು ಬರುವಾಗ ರಸ್ತೆಯ ಪಕ್ಕದಲ್ಲಿ ಮರಕ್ಕೆ ಒಂದು ಕಾರು ಸಂಖ್ಯೆ 7125 ಮರಕ್ಕೆ ಢಿಕ್ಕಿ ಆಗಿರುತ್ತದೆ. ಅದೇ ಸಮಯದಲ್ಲಿ ಇನ್ನೊಂದು ಮಾರುತಿ ಓಮಿನಿ 4084 ಕಾರ್ ನಲ್ಲಿರುವ ಪ್ರಯಾಣಿಕರು ಮರಕ್ಕೆ ಢಿಕ್ಕಿ ಆಗಿರುವ ವಾಹನವನ್ನು ನೋಡಿಕೊಂಡು ನಿಂತಿದ್ದು, ನಾನು ಆ ಸಮಯದಲ್ಲಿ ಬಸ್ಸ್ ನ್ನು ರಸ್ತೆಯ ಪಕ್ಕದಲ್ಲಿ ನಿಲ್ಲಿಸಿದ್ದು ಓಮಿನಿ ಕಾರ್ ನವರು ನನ್ನ ಬಸ್ಸ್ ನ ಮುಂದೆಗಡೆ ನಿಲ್ಲಸಿದ್ದು ಅವರು ಕಾರನ್ನು ತೆಗೆಯಲು ಹೋಗಿ ರಿವರ್ಸ ಬಂದು ಬಸ್ಸ್ ಗೆ ಢಿಕ್ಕಿ ಪಡಿಸಿರುತ್ತಾರೆ. ನಾನು ಆ ಸಮಯದಲ್ಲಿ ಕೂಗಿಕೊಂಡಾಗ ಗಾಬರಿಯಿಂದ ಓಮಿನಿ ಕಾರ್ ಚಾಲಕ ಸಡನ್ ಆಗಿ ಮುಂದೆಗಡೆ ಚಾಲನೆ

ಮಾಡಿದ್ದು ಆಗ ಓಮಿನಿ ಕಾರ್ ಮುಂದೆಗಡೆ ಇರುವ ಮತ್ತೊಂದು ಕಾರ್ ಸಂಖ್ಯೆ 3033 ಗೆ ಢಿಕ್ಕಿ ಹೊಡೆಸಿರುತ್ತಾರೆ.

ಸದರಿ ಕಾರ್ ಸಂಖ್ಯೆ 3033 ರಲ್ಲಿರುವ ಆರೋಪಿತರು ಓಮಿನಿಯನ್ನು ಬಿಟ್ಟು ನನ್ನದು ತಪ್ಪೆಂದು ನನ್ನನ್ನು ಬಸ್ಸ್ ನ ಕೆಳಗೆ ಇಳಿಸಿ ಶರ್ಟ ಮತ್ತು ಪ್ಯಾಂಟ್ ಹರಿದು ನನಗೆ ಹೊಡೆಬಡೆ ಮಾಡಿರುತ್ತಾರೆ. ನಂತರ ನನ್ನನ್ನು ಅವರ ಕಾರಿನಲ್ಲಿ ಎತ್ತಿಹಾಕಿಕೊಂಡು ಹೋಗಿರುತ್ತಾರೆ. ತಿಪಟೂರು ಎಲ್ಲಾ ಸುತ್ತಾಡಿಸಿ ಕೆ.ಬಿ ಕ್ರಾಸ್-ತುರುವೇಕೆರೆ ಮಾರ್ಗವಾಗಿ ಕುಣಿಗಲ್ ಸಿವಿಲ್ ಬಸ್ಸ್ ಸ್ಟಾಪ್ ಹತ್ತಿರ ಬಿಟ್ಟಿರುತ್ತಾರೆ ಮತ್ತು ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ಆರೋಪಿತರು ತಮ್ಮ ಅಕೌಂಟ್ ನಂಬರನ್ನು ಕೊಟ್ಟು ನನಗೆ 1,50,000 ರೂ. ಹಣ ಅವರ ಖಾತೆಗೆ ಹಾಕಲು ದಮ್ಕಿ ಕೊಟ್ಟು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಈ ಸಂಬಂಧ ನಾನು ಚಿಕಿತ್ಸೆ ಪಡೆದಿರುತ್ತೇನೆ. ನಂತರ ನಾನು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಂತರ ದಿಃ 14-11-2016 ರಂದು ಬೆಳಗ್ಗೆ 11-30 ರಿಂದ 2-30 ರ ತನಕ ನನ್ನ ಸಮಕ್ಷಮ ಪೊಲೀಸರು ಸ್ಥಳ ಸಮಜರನ್ನು ಮಾಡಿರುತ್ತಾರೆ ನನ್ನ ಜೊತೆ ಸ್ಥಳ ಮಹಜರ್ ಗೆ ಚಾಸಾ-2 ಮತ್ತು 3 ಸಹಿ ಹಾಕಿರುತ್ತಾರೆ. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ದಿಃ 17-11-2016 ರಂದು ಸಂಜೆ 7-30 ರಿಂದ 8-15 ರ ವರೆಗೆ ಪೊಲೀಸರು ಠಾಣೆಯಲ್ಲಿ ನಾನು ಹಾಜರು ಪಡಿಸಿರುವ ರಕ್ತಕಲೆಯಾದ ಬಟ್ಟೆಗಳನ್ನು ಪಂಚನಾಮೆ ಮೂಲಕ ಸಾಕ್ಷಿಗಳ ಸಮಕ್ಷಮ ಚಾಸಾ-4 ಮತ್ತು ಇನ್ನೊಬ್ಬರ ಸಮಕ್ಷಮ ಜಪ್ತು ಮಾಡಿಕೊಡಿಂರುತ್ತಾರೆ. ಸಾಕ್ಷಿಯು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ಧರಿಸಿದ್ದ ಶರ್ಟ ಮತ್ತು ಪ್ಯಾಂಟ್ ನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಎಂಓ-1 ಮತ್ತು 2 ಎಂದು ಗುರುತಿಸಲಾಯಿತು. ದಿಃ 21-12-2016 ರಂದು ಕೃತ್ಯ ಎಸಗಿದವರು 4 ಜನ ಅಲ್ಲ ಇಬ್ಬರು ಎಂದು ಮರು ಹೇಳಿಕೆಯನ್ನು ಕೊಟ್ಟಿರುತ್ತೇನೆ. ಈ ಸಂಬಂಧ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು ಶ್ರೀ ಕೆ ಎಸ್ ಎಸ್ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ತನಕ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು 12 ವರ್ಷದಿಂದ ಕೆ ಎಸ್ ಆರ್ ಟಿ ಸಿ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಈಗ ಶಿವಮೊಗ್ಗ ಡಿಪೋದಲ್ಲಿ ಕೆಲಸ ಮಾಡುತ್ತಿದ್ದೇನೆ. ಗಲಾಟೆಯಾಗುವಾಗ ಬೆಳಗಿನ ಸಮಯ4 ರಿಂದ 4-30 ಆಗಿರುತ್ತದೆ. ನನಗೆ ಶಿವಮೊಗ್ಗದಿಂದ ಬೆಂಗಳೂರಿಗೆ ಹೋಗಲು ಡ್ರೈವರ್ ಆಗಿ ಕೆ ಎಸ್ ಆರ್ ಟಿ ಸಿ ಬಸ್ಸ್ ಗೆ ನೇಮಕ ಮಾಡಿರುತ್ತಾರೆ ಎಂದರೆ ಸರಿ. ಬೆಂಗಳೂರಿನಿಂದ ನಾನು ಶಿವಮೊಗ್ಗಕ್ಕೆ ಹೋಗುತ್ತಿದ್ದೆ. ನಾನು ಎನ್ ಹೆಚ್ 206 ರಸ್ತೆಯಲ್ಲಿ ಸಾಕಷ್ಟು ಸಲ ಓಡಾಡಿದ್ದೇನೆ ಎಂರದೆಸ ರಿ. ಸುಮಾರು ನಾನು 4-5 ವರ್ಷಗಳಿಂದ ಓಡಾಡಿರುತ್ತೇನೆ. ಸದರಿ ರಸ್ತೆ ತುಂಬಾ ಅಗಲವಾಗಿರುತ್ತದೆ ಮತ್ತು ಚೆನ್ನಾಗಿ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಕೆ ಎಸ್ ಆರ್ ಟಿ ಸಿ ಬಸ್ಸ್ ಗಳು ಬೆಳಗಿನ ಜಾವ ವೇಗವಾಗಿ ಹೋಗುತ್ತವೆ ಎಂದರೆ ಸರಿಯಲ್ಲ. ನಾನು ಶಿವಮೊಗ್ಗಕ್ಕೆ 6-30 ತಲುಪಬೇಕಾಗಿದ್ದು ಆದ ಕಾರಣ ನಾನು ಸಮಯ ಉಳಿಸಲು ಅತೀವೇಗದಿಂದ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ದಿನ ಮಾರುತಿ ಶಿಫ್ಟ್ ಸಂಖ್ಯೆ ಕೆಎ-03-ಎಂಎಕ್ಸ್-7525 ವಾಹನವು ಮರಕ್ಕೆ ಢಿಕ್ಕಿ ಪಡಿಸಿರುತ್ತದೆ ಎಂದರೆ ಸರಿ. ಢಿಕ್ಕಿ ಪಡಿಸಿರುವ ಶಿಫ್ಟ್ ಕಾರ್ ಪಕ್ಕದಲ್ಲಿ 4-5 ಅಡಿ ಬಿಟ್ಟು ಕೆಎ-05-ಜಡ್-4084 ಬಿಳಿ ಓಮಿನಿ ನಿಂತಿತ್ತು ಎಂದರೆ ಸಾಕ್ಷಿಯು ರಸ್ತೆಯಲ್ಲಿ ನಿಂತಿತ್ತು ಎಂದು ನುಡಿಯುತ್ತಾರೆ. ಸದರಿ ಓಮಿನಿ ಕಾರ್ ಮುಂದೆ 8 ರಿಂದ 10 ಅಡಿ ದೂರದಲ್ಲಿ ಮತ್ತೊಂದು ವಾಹನ ಕೆಎ-54-ಎಂ-3033 ವಾಹನ ಓಕ್ಸ್ ವೇಗ್‌ನಾರ್ ನಿಂತಿತ್ತು ಎಂದರೆ ಸರಿ. ಢಿಕ್ಕಿ ಪಡಿಸಿರುವ ಶಿಫ್ಟ್ ಕಾರಿನಲ್ಲಿರುವ ವ್ಯಕ್ತಿಗಳನ್ನು ಕಾಪಾಡಲಿಕ್ಕೆ ಆರೋಪಿತರು ಪ್ರಯತ್ನ ಪಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಅತಿವೇಗದಿಂದ ಬಂದು ಓಮಿನಿ ಕಾರಿಗೆ ಢಿಕ್ಕಿ ಹೊಡೆಸಿದ್ದ ಸದರಿ ಓಮಿನಿ ಕಾರು ಆರೋಪಿತರ ವಾಹನಕ್ಕೆ ಢಿಕ್ಕಿ ಮಾಡಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರ ಕಾರು ನನ್ನ ತಪ್ಪಿನಿಂದ ಜಖಂ ಆಗಿರುತ್ತದೆ ಎಂದರೆ ಸರಿಯಲ್ಲ.

ನನ್ನ ಬಸ್ಸಿನಲ್ಲಿ ಸುಮಾರು 20 ರಿಂದ 25 ಜನ ಇದ್ದರು. ನಾನು ಢಿಕ್ಕಿ ಪಡಿಸಿರುವ ಓಮಿನಿ ಕಾರಿ ನಲ್ಲಿರುವ ವ್ಯಕ್ತಿಯೂ ಸಹ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನಾನು ತಪ್ಪು ಮಾಡಿದ್ದರಿಂದ ಅದಕ್ಕೆ ಎಲ್ಲಾ ಖರ್ಚುಗಳು 1 ವರೆ ಲಕ್ಷ ಬರಬಹುದು ಹೇಗೆ ಮಾಡಬಹುದು ಎಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ನನಗೆ ಹಣ ಕೊಡಲ ಧಮ್ಕಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಆರೋಪಿತರಿಗೆ ಕಾರನ್ನು ರಿಪೇರಿ ಮಾಡಿಸಿ ನಾನು ಹಣವನ್ನು ನಿಮ್ಮ ಖಾತೆಗೆ ಹಾಕುತ್ತೇನೆಂದು ಹೇಳಿ ಅವರಿಂದ ಬ್ಯಾಂಕ್ ಖಾತೆ ಸಂಖ್ಯೆ ಯನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ

ದಿನ ಹಣ ಕೊಡಲು ಒಪ್ಪಿ ನನ್ನ ಮೊಬೈಲ್ ಸಂಖ್ಯೆ ಅವರಿಗೆ ಕೊಟ್ಟು ಅವರ ಮೊಬೈಲ್ ಸಂಖ್ಯೆ ಮತ್ತು ಖಾತೆ ಸಂಖ್ಯೆಯನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಆಕ್ಸಿಡೆಂಟ್ ಆಗಿರುವ ವಿಷಯ ಮತ್ತು ಮಾತುಕತೆ ಆಗಿರುವ ವಿಷಯವನ್ನು ನಮ್ಮ ಮ್ಯಾನೇಜರ್ ಗೆ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹೊಡೆಬಡೆ ಮಾಡಿರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಕರ್ತವ್ಯಕ್ಕೆ ಆರೋಪಿತರು ಅಡ್ಡಿ ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನನ್ನು ಆರೋಪಿತರು ಕರಿನಲ್ಲಿ ಎತ್ತಿಹಾಕಿಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾಹನದಿಂದ ಕಾರ್ ಗಳನ್ನು ಜಖಂ ಮಾಡಿದ್ದು ಅವರಿಗೆ ಹಣ ಕೊಡಬೇಕಾಗುತ್ತದೆ ಎಂದು ಈ ಸುಳ್ಳು ಪ್ರಕರಣ ತಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಬಟ್ಟೆಗಳನ್ನು ನಾನೇ ಹರಿದುಕೊಂಡು ಹಣ ಕೊಡುವುದನ್ನು ತಪ್ಪಿಸಲು ಸುಳ್ಳು ಎಂ.ಓ-1 ಮತ್ತು 2 ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

2016 ನೇ ಇಸವಿಯಲ್ಲಿ ಸರ್ಕಾರದ ಆದೇಶದಂತೆ ವಾಹನಗಳಿಗೆ ಕೂಲಿಂಗ್ ಪೇಪರ್ ಇರಬಾರದು ಎಂದು ಆದೇಶವಾಗಿರುತ್ತದೆ ಎಂದರೆ ಸರಿ. ಕಾರಿನಲ್ಲಿ ಕುಂತವರು ಹೊರಗಡೆ ಇದ್ದವರಿಗೆ ಸ್ಪಷ್ಟವಾಗಿ ಕಾಣುತ್ತದೆ ಎಂದರೆ ಸರಿ. ನನ್ನನ್ನು ಕರೆದುಕೊಂಡು ಹೋಗಿರುವ ಕಾರಿಗೆ ಪೊಲೀಸರು ಕೈ ಅಡ್ಡ ಹಾಕಿದರು ಆರೋಪಿತರು ನನ್ನನ್ನು ನಿಲ್ಲಿಸದೆ ಆರೋಪಿತರು ನನ್ನನ್ನು ಅಪಹರಣ ಮಾಡಿಕೊಂಡು ಹೋಗಿರುತ್ತಾರೆ. ನನಗೆ ಕೂಗಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಆರೋಪಿತರು ಬೆದರಿಕೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

ಪೊಲೀಸರು ಕೈ ಅಡ್ಡ ಹಾಕಿದರೂ ಆರೋಪಿತರು ನಿಲ್ಲಿಸದೇ ವಾಹನವನ್ನು ಚಾಲನೆ ಮಾಡಿಕೊಂಡು ಹೋಗಿದ್ದು ಈ ಸಂಬಂಧ ನಮ್ಮನ್ನು ಹಿಂಬಾಲಿಸಿಕೊಂಡು ಪೊಲೀಸರು ಬಂದಿರುವುದಿಲ್ಲ. ನನ್ನನ್ನು ಅಪಹರಣ ಮಾಡಿರುವುದಿಲ್ಲ ಕಾರಿನಲ್ಲಿ ನನ್ನನ್ನು ಕರೆದುಕೊಂಡು ಹೋಗಿರುವುದಿಲ್ಲ ಪೊಲೀಸರು ಆರೋಪಿತರ ವಾಹನಕ್ಕೆ ಕೈ ಅಡ್ಡ ಹಾಕಿರುವುದಿಲ್ಲ ಆದ ಕಾರಣ ಪೊಲೀಸರು ನಮ್ಮ ವಾಹನವನ್ನು ಹಿಂಬಾಲಿಸಿಕೊಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನನ್ನು ಕುಣಿಗಲ್ ಬಸ್ಸ್ ಸ್ಟಾಂಡ್ ಗೆ ಆರೋಪಿತರು ಬಿಟ್ಟು ಹೋಗಿರುವುದಿಲ್ಲ ನನ್ನನ್ನು ಅಪಹರಣ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಕುಣಿಗಲ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ.

ಪೊಲೀಸರು ಸ್ಥಳಕ್ಕೆ ಬಂದು ಮಹಜರನ್ನು ಬರೆದಿರುತ್ತಾರೆ. ಯಾವ ಪೊಲೀಸರು ಬರೆದಿರುತ್ತಾರೆ ನನಗೆ ಗೊತ್ತಿರುವುದಿಲ್ಲ ಆದರೆ ಕಾರ್ಡ ಬೋರ್ಡ ಪೇಪರ್ ತೆಗೆದುಕೊಂಡು ಬರೆದಿರುತ್ತಾರೆ. ಪೊಲೀಸರು ಬರೆದ ನಂತರ ನಾನು ಸಹಿ ಮಾಡಿರುತ್ತೇನೆ.

ಅಮಾನತ್ತು ಮಹಜರನ್ನು ಪೋಲೀಸರು ಕಾರ್ಡ ಬೋರ್ಡ ಪೇಪರ್ ಮತ್ತು ಪೆನ್ನುಗಳಿಂದ ಬರೆದಿರುತ್ತಾರೆ ಎರಡೂ ಮಹಜರ್ ಕೈಬರಹದಲ್ಲಿರುತ್ತದೆ ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ನಾನು ದುಡ್ಡು ಕೊಡಬೇಕಾಗುತ್ತದೆ ಎಂದು ಹೇಳಿ ಅವರಿಂದ ತಪ್ಪಿಸಿಕೊಳ್ಳಲು ಸುಳ್ಳು ಪ್ರಕರಣದ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಬೆಂಗಳೂರು ರಾತ್ರಿ 11-45 ಕ್ಕೆ ಬಿಟ್ಟಿರುತ್ತೇನೆ. ನಾನು ಶ್ರೀನಿಧಿ ಡಾಬಾಗೆ ತಲುಪುವ ಸಮಯಕ್ಕೆ ಬೆಳಗಿನ ಜಾವ ಆಗಿದ್ದರಿಂದ ನನಗೆ ನಿದ್ದೆ ಬರುತ್ತಿತ್ತು ಎಂದರೆ ಸರಿಯಲ್ಲ. ನಾನು ನಿದ್ದೆ ಮೊಬ್ಬಿನಲ್ಲಿ ಹೋಗಿ ಅಪಘಾತ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.